ನಮ್ಮ ಮುಂದೆ ಇರತಕ್ಕ ಪೇಪರ್ಸ್‌ಗಳನ್ನು ತಾವು ವಿಲೇ ಮಾಡಿ ಎಂದಾದರೂ ಹೇಳಬೇಕು ಅಥವಾ ಸರ್ಕಾರದ ಪರವಾಗಿ ಯಾರಾದರೂ ಒಬ್ಬರು ಮೊದಲೇ ಎದ್ದುನಿಂತ ಸರ್ಕಾರದ ಪರವಾಗಿ ನಾವು ಈ ಜವಾಬ್ದಾರಿ ವಹಿಸಿಕೊಳ್ಳುತ್ತೇವೆಂದು ಹೇಳಬಹುದು. ಇಷ್ಟು ರಿಜ್ಯುಯಲ್ ಆಗಿ ಮಾಡತಕ್ಕಂಥದ್ದು ನನಗೇನೋ ಪರವಾಗಿಲ್ಲ. ಆದರೆ ಈ ಸ್ಥಾನದ ಗೌರವವನ್ನು ದಯಮಾಡಿ ಕಾಪಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಅಲ್ಲಿ ಒಬ್ಬಿಬ್ಬರು ಇರಬಹುದು. ಸುಮ್ಮನೆ ಇದಕ್ಕೆ ಏತಕ್ಕೆ ನಾಟಕ ಮಾಡುತ್ತೀರಿ ಅಲ್ಲಿದ್ದಾರೆ ಎಂದು ಹೇಳಿ.

ಶ್ರೀ ಸಿದ್ಧರಾಮಯ್ಯ :— ಎಲ್ಲಕ್ಕೂ ನಾಟಕಾವಾ? ನಾಟಕ ಎಂದರೇನು?

ಶ್ರೀ ಕೆ.ಎಸ್. ಈಶ್ವರಪ್ಪ :— ಮತ್ತಿನ್ನೇನು ಬೇರೆ? ಇಲ್ಲ ಎಂದು ಒಪ್ಪಿಕೊಳ್ಳಿ. ಎಲ್ಲಾ ಬೇರೆ ಕೆಲಸಗಳಿಗೆ ಹೋಗಿದ್ದಾರೆ. ಗುಂಪುಗಾರಿಕೆಗೆ ಹೋಗಿದ್ದಾರೆ. ಆ ಗುಂಪಿನ ಜೊತೆ ಹೋಗಿದ್ದಾರೆ, ಈ ಗುಂಪಿನ ಜೊತೆ ಹೋಗಿದ್ದಾರೆ ಎಂಬ ಇರತಕ್ಕ ವಿಚಾರವನ್ನು ತಿಳಿಸಿ. ಮಂತ್ರಿಗಳು ಅವರು ತಮ್ಮ ಜವಾಬ್ದಾರಿ ಹೊರಲು ವಿಫಲರಾಗಿದ್ದಾರೆಂದು ಒಪ್ಪಿಕೊಳ್ಳಿ.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) :— ಅಧ್ಯಕ್ಷರೇ, ಮೊದಲನೇ ಪಟ್ಟಿಯಲ್ಲಿರುವ ಆ ಸಮೂಹದ ಲಿಖಿತ ಮೂಲಕ ಉತ್ತರಿಸುವ ಒಟ್ಟು 23 ಪ್ರಶ್ನೆಗಳ ಪೈಕಿ 20 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ :— ಎಂ.ಆರ್.ಪಿ.ಎಲ್. ಕೈಗಾರಿಕಾ ಪ್ರದೇಶದ ಸಂತ್ರಸ್ತ ಕುಟುಂಬಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

1(222) ಶ್ರೀ ಕುಂಭೆ ಸುಂದರರಾವ್ (ಸೂರತ್‌ಕಲ್) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಎಂ.ಆರ್.ಪಿ.ಎಲ್. ಕೈಗಾರಿಕೆಯ ಪ್ರದೇಶದ ಸಂತ್ರಸ್ತ ಕುಟುಂಬಗಳ ಸಂಖ್ಯೆ ಎಷ್ಟು? ಅವರುಗಳನ್ನು ಸ್ಥಳಾಂತರಿಸುವನಂತರ ಅವರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?